ಕೆ.ಬಿ.ಜೆ.ಎನ್.ಎಲ್. ನವೀಕರಣ ಕಾಮಗಾರಿ

85 (1918); ಶ್ರೀ ಗುರುಪಾಟೀಲ ಶಿರವಾಳ (ಶಹಾಪುರ)

ಅ) ಕೆ.ಬಿ.ಜೆ.ಎನ್.ಎಲ್. ನಿಗಮದ ನಾರಾಯಣಪುರ ಬಲದಂಡೆಯಲ್ಲಿ ಬರುವ ಎಸ್.ಬಿ.ಸಿ., ಜೆ.ಬಿ.ಸಿ. ಮತ್ತು ಎಂ.ಬಿ.ಸಿ. ವಿತರಣಾ ಕಾಲುವೆಗಳ ನವೀಕರಣ ಕಾಮಗಾರಿಯು ನಡೆದಿದ್ದು, ಇದರ ಜೊತೆಗೆ ಡಿಸ್ಟ್ರಿಬ್ಯೂಟರಿ ಮತ್ತು ಲ್ಯಾಟರ್‌ಗಳ ನವೀಕರಣ ಕಾಮಗಾರಿಯನ್ನು ಸಂಪೂರ್ಣವಾಗಿ ಕೈಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಡಿಸ್ಟ್ರಿಬ್ಯೂಟರಿ ಮತ್ತು ಲ್ಯಾಟರ್‌ಗಳ ಕಾಲುವೆಗಳು ಸಂಪೂರ್ಣವಾಗಿ ಹಾಳಾಗಿದ್ದು, ಇವುಗಳ ನವೀಕರಣ ಮಾಡಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳಲಿದೆ?

ಶ್ರೀ ಎಂ.ಬಿ. ಪಾಟೀಲ್ (ಮಾನ್ಯ ಜಲ ಸಂಪನ್ಮೂಲ ಸಚಿವರು)

ಅ) ಕೆ.ಬಿ.ಜೆ.ಎನ್.ಎಲ್. ನಿಗಮದ ಕೃಷ್ಣಾ ಮೇಲ್ದಂಡೆ ಯೋಜನೆಯಡಿಯಲ್ಲಿ ಬರುವ ಎಸ್.ಬಿ.ಸಿ., ಜೆ.ಬಿ.ಸಿ. ಮತ್ತು ಎಂ.ಬಿ.ಸಿ. ವಿತರಣಾ ಕಾಲುವೆಗಳು ನಾರಾಯಣಪುರ ಎಡದಂಡೆ ಕಾಲುವೆಯಡಿ ಬರುತ್ತವೆ. ನಾರಾಯಣಪುರ ಎಡದಂಡೆ ಕಾಲುವೆ ಜಾಲದ ಆಧುನೀಕರಣ ಯೋಜನೆಯಲ್ಲಿ ಈಗಾಗಲೇ ಮೊದಲನೇ ಹಂತದಡಿ 2014ನೇ ಸಾಲಿನ ಕಾಲುವೆ ಕ್ಲೋಜರ್ ಅವಧಿಯಲ್ಲಿ ಮುಖ್ಯ/ಶಾಖಾ ಕಾಲುವೆಗಳ ಆಧುನೀಕರಣದ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ ಹಾಗೂ ಕಾಲುವೆಗಳಲ್ಲಿ ನೀರು ಹರಿಸಲಾಗಿರುತ್ತದೆ.

ಆ) ಪ್ರಸಕ್ತ ಕ್ಲೋಜರ್ ಅವಧಿ ಹಾಗೂ ನಾನ್-ಕ್ಲೋಜರ್ ಅವಧಿಯಡಿ ನಾರಾಯಣಪುರ ಎಡದಂಡೆ ಕಾಲುವೆ ಜಾಲದಡಿ ಶಿಥಿಲಾವಸ್ಥೆಯಲ್ಲಿರುವ ವಿತರಣಾ ಕಾಲುವೆ, ಲ್ಯಾಟರಲ್ ಹಾಗೂ ಸಬ್ ಲ್ಯಾಟರಲ್‌ಗಳನ್ನು ಆದ್ಯತೆಯ ಮೇರೆಗೆ ಗುರುತಿಸಿ

ಆಧುನೀಕರಣದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ.

(₹ ಕೋಟಿಗಳಲ್ಲಿ)

ಕ್ರ. ಸಂ.	ಆಧುನೀಕರಣ ಕಾಮಗಾರಿ ಹೆಸರು	ಮೊತ್ತ	ವಿತರಣಾ ಕಾಲುವೆ ಜಾಲದ ಉದ್ದ	ಷರಾ
1	ಶಹಾಪುರ ಶಾಖಾ ಕಾಲುವೆ ಅಡಿ ಬರುವ ವಿತರಣಾ ಕಾಲುವೆ, ಲ್ಯಾಟರಲ್ ಹಾಗೂ ಸಬ್ ಲ್ಯಾಟರಲ್‌ಗಳು	540.14	554 ಕಿ.ಮೀ.	ಆಧುನೀಕರಣ ಕಾಮಗಾರಿಗಳು ಪ್ರಗತಿಯಲ್ಲಿವೆ
2	ಮುಡಬಾಳ ಶಾಖಾ ಕಾಲುವೆ ಅಡಿ ಬರುವ ವಿತರಣಾ ಕಾಲುವೆ, ಲ್ಯಾಟರಲ್ ಹಾಗೂ ಸಬ್ ಲ್ಯಾಟರಲ್‌ಗಳು	77.09	138 ಕಿ.ಮೀ.	
3	ಜೇವರ್ಗಿ ಶಾಖಾ ಕಾಲುವೆ ಅಡಿ ಮುಖ್ಯ ಕಾಲುವೆ ಕಿ.ಮೀ. 40.00 ರಿಂದ 86.36 ರಲ್ಲಿಯ ಆಯ್ದ ಭಾಗ	52.30	17 ಕಿ.ಮೀ. ಆಯ್ದ ರೀಚ್	
4	ಜೇವರ್ಗಿ ಶಾಖಾ ಕಾಲುವೆ ಅಡಿ ಬರುವ ವಿತರಣಾ ಕಾಲುವೆ, ಲ್ಯಾಟರಲ್ ಹಾಗೂ ಸಬ್ ಲ್ಯಾಟರಲ್‌ಗಳು	ಟೆಂಡರ್ ಪ್ರಕ್ರಿಯೆಯಲ್ಲಿದೆ.		

ಮೇಲ್ಕಂಡ ಕಾಲುವೆಗಳ ಜಾಲದಡಿ 150 ಕ್ಯೂಸೆಕ್ಸ್‌ಗಿಂತ ಕಡಿಮೆ ಡಿಸ್‌ಚಾರ್ಜ್ ಹೊಂದಿರುವ ಲ್ಯಾಟರಲ್ ಮತ್ತು ಸಬ್–ಲ್ಯಾಟರಲ್‌ಗಳ ಆಧುನೀಕರಣದ ಕಾಮಗಾರಿಗಳನ್ನು CADWM ಯೋಜನೆಯಡಿ ಕೈಗೆತ್ತಿಕೊಳ್ಳಲು ₹ 750.00 ಕೋಟಿ ಮೊತ್ತದ ಯೋಜನಾ ವರದಿಯನ್ನು ದಿನಾಂಕ: 09.03.2015 ರಂದು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಅನುಮೋದನೆಯ ನಂತರ ಆಧುನೀಕರಣ ಕಾಮಗಾರಿಗಳನ್ನು ಹಂತ ಹಂತವಾಗಿ ತೆಗೆದುಕೊಳ್ಳಲು ಯೋಜಿಸಿದೆ.

ಶ್ರೀ ಗುರುಪಾಟೀಲ್ ಶಿರವಾಳ:– ಸನ್ಮಾನ್ಯ ಸಭಾಧ್ಯಕ್ಷರೆ, ಉತ್ತರವನ್ನೇನೋ ಒದಗಿಸಿದ್ದಾರೆ. ನಾನು ಕೇಳಿರುವುದು ಡಿಸ್ಟ್ರಿಬ್ಯೂಟರಿ ಮತ್ತು ಲ್ಯಾಟರ್‌ಗಳ ಸಂಪೂರ್ಣವಾದ ಕಾಮಗಾರಿಗಳನ್ನು ಕೈಗೊಳ್ಳದಿರುವ ಬಗ್ಗೆ. ಒಂದು ಕಡೆ ಇವರು ಕಾಮಗಾರಿಯನ್ನು ಸಂಪೂರ್ಣವಾಗಿ ಪೂರ್ಣಗೊಳಿಸಲಾಗಿದೆ ಹಾಗೂ ನೀರು ಹರಿಸಲಾಗುತ್ತಿದೆ ಎಂದು ಹೇಳುತ್ತಿದ್ದಾರೆ. ಆದರೆ ಅಲ್ಲಿ ಸಂಪೂರ್ಣವಾಗಿ ಇನ್ನು ಕಾಮಗಾರಿಗಳು ಮುಗಿದಿರುವುದಿಲ್ಲ. ಅಲ್ಲಿ ಆಯ್ದ ಭಾಗಗಳನ್ನು ಮಾತ್ರ ತೆಗೆದುಕೊಂಡಿರುತ್ತಾರೆ. ಇನ್ನೊಂದು ಕಡೆ ತಾವು ಹೇಳಿದ್ದೀರಿ, ಈ lateral, sublateral ಮತ್ತು distributory ಗಳು 150 ಕ್ಯೂಸೆಕ್ಸ್‌ಗಿಂತ ಕಡಿಮೆ ಇರುವಂಥದ್ದು CADWM ಯೋಜನೆಯಡಿಯಲ್ಲಿ 750 ಕೋಟಿ ರೂಪಾಯಿಗಳ ಮೊತ್ತಕ್ಕೆ ಯೋಜನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ. ದಯಮಾಡಿ ನೀವು ಕೇಂದ್ರ ಸರ್ಕಾರ ಎನ್ನುವುದಕ್ಕಿಂತ ರಾಜ್ಯ ಸರ್ಕಾರದ ಯಾವುದೇ ಯೋಜನೆಯಡಿಯಲ್ಲಿ ಇದನ್ನು ತೆಗೆದುಕೊಳ್ಳಬೇಕೆಂದು ಬಹಳ ಒತ್ತಾಯ ಮಾಡುತ್ತೇನೆ. ಇದರಿಂದ ರೈತರಿಗೆ ತುಂಬಾ ತೊಂದರೆಯಾಗುತ್ತಿದೆ.

ಶ್ರೀ ಎಂ.ಬಿ. ಪಾಟೀಲ (ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು):– ಈಗಾಗಲೇ ನಾರಾಯಣಪುರ್ ಎಡದಂಡೆ ಕಾಲುವೆ ಸುಮಾರು 3200 ಕೋಟಿ ರೂಪಾಯಿಗಳ ಬೃಹತ್ತಾದ ಯೋಜನೆಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ನಮ್ಮ ನೂತನ ಸರ್ಕಾರ ತೆಗೆದುಕೊಳ್ಳುವುದಾಗಿದೆ. ಇವರು ಹೇಳುವುದು ಜೇವರ್ಗಿ ಶಾಖಾ

ಕಾಲುವೆಯಡಿ ಬರುವಂಥ ವಿತರಣಾ ಕಾಲುವೆ ಮತ್ತು lateral ಹಾಗು sub lateral ಈಗಾಗಲೇ ಟೆಂಡರ್ ಪ್ರಕ್ರಿಯೆಯಲ್ಲಿದೆ. ಇನ್ನುಳಿದಿರುವುದು 150 ಕ್ಯೂಸೆಕ್ಸ್‌ಗಿಂತ ಕಡಿಮೆ discharge ಹೊಂದಿರುವಂಥ lateral ಹಾಗೂ sublateral ಗಳ ಆಧುನೀಕರಣಗೊಳಿಸುವ ಸಲುವಾಗಿ ಈಗಾಗಲೇ CADWM ಕೇಂದ್ರ ಸರ್ಕಾರದಲ್ಲಿ ಅನುಮೋದನೆಯನ್ನು ಸಲ್ಲಿಸಿದ್ದೇವೆ. ಅದರ ಅನುಮೋದನೆ ದೊರೆತ ನಂತರ ಆಧುನೀಕರಣ ಕಾಮಗಾರಿಯನ್ನು ಹಂತ ಹಂತವಾಗಿ ತೆಗೆದುಕೊಳ್ಳುತ್ತಾ ಇದರ ನಡುವೆ ಮಾನ್ಯ ಸದಸ್ಯರು ಹೇಳಿದ ಹಾಗೆ ಎಲ್ಲಾದರೂ ನೀರಿನ ನಿರ್ವಹಣೆಗೆ ತೊಂದರೆಯಾಗುತ್ತಿದ್ದರೆ ಅದನ್ನು ರಾಜ್ಯ ಸರ್ಕಾರಕ್ಕೆ ತೆಗೆದುಕೊಳ್ಳುವುದಕ್ಕೆ ನಾವು ಪರಿಶೀಲನೆ ಮಾಡುತ್ತೇವೆ.

ಕ್ಷಿಪ್ರ ಕಾರ್ಯಪಡೆ ರಚಿಸುವುದು

87 (1252); ಶ್ರೀ ಐಹೋಳೆ ಡಿ. ಮಹಾಲಿಂಗಪ್ಪ (ರಾಯಭಾಗ)

ಅ) ರಾಜ್ಯದ ಅರಣ್ಯ ಇಲಾಖೆಯಲ್ಲಿ ಪ್ರತಿ ಜಿಲ್ಲೆಗೊಂದರಂತೆ ಕ್ಷಿಪ್ರ ಕಾರ್ಯಪಡೆ ರಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ;

ಆ) ಹಾಗಿದ್ದಲ್ಲಿ, ಯಾವಾಗ ರಚನೆ ಮಾಡಲಾಗುವುದು;

ಇ) ಇದರಿಂದ ಮಾನವ–ಪ್ರಾಣಿ ಸಂಘರ್ಷವನ್ನು ಹಾಗೂ ಅರಣ್ಯ ಅತಿಕ್ರಮಣವನ್ನು ತಡೆಗಟ್ಟಬಹುದಾಗಿದೆಯಲ್ಲವೆ; ಈ ಕುರಿತು ಸರ್ಕಾರದ ನಿಲುವೇನು?

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಶ್ತ್ರ ಸಚಿವರು)

ಅ) ರಾಜ್ಯದ ಅರಣ್ಯ ಇಲಾಖೆಯಲ್ಲಿ ಮಾನವ–ವನ್ಯಪ್ರಾಣಿ ಸಂಘರ್ಷ ಹೆಚ್ಚಾಗಿರುವ ಪ್ರದೇಶಗಳಿಗೆ ಸಂಬಂಧಿಸಿದ ವಿಭಾಗಗಳಲ್ಲಿ ಈಗಾಗಲೇ ಕ್ಷಿಪ್ರ ಸ್ಪಂದನ ತಂಡ (Rapid Response Team) ಗಳನ್ನು ರಚಿಸಲಾಗಿದೆ.